**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊನ್ನಾವರ**

**ಫೌಜುದಾರಿ ಪ್ರಕರಣ ಸಂಖ್ಯೆ : 93/2020**

**ಚಾ.ಸಾಃ 6, ಫ್ರಾ.ಸಾಃ 4**

| | |
|---|---|
| ಸಾಕ್ಷಿದಾರನ ಹೆಸರು | ಲಕ್ಷ್ಮೀ ಭಂಡಾರಿ |
| ಗಂಡನ ಹೆಸರು | ಸೀತಾರಾಮ ಭಂಡಾರಿ |
| ವಯಸ್ಸು | 73 ವರ್ಷ |
| ಉದ್ಯೋಗ | ಮನೆಕೆಲಸ |
| ವಾಸ್ತವ್ಯ | ಜಡ್ಡಿಗದ್ದೆ, ಕಡತೋಕಾ |

**ಸಾಕ್ಷಿಯನ್ನು ದಿನಾಂಕಃ 15-06-2024 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎಪಿಪಿಯವರಿಂದ,**

ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನೋಡಿರುತ್ತೇನೆ.

ನಮ್ಮ ಮನೆ ಕಡತೋಕಾದ ಜಡ್ಡಿಗದ್ದೆ ಸರಕಾರಿ ಆಸ್ಪತ್ರೆ ಹತ್ತಿರ ನಮ್ಮ ಮನೆ ಇದೆ. ಈಗ್ಗೆ 4 ವರ್ಷಗಳ ಹಿಂದೆ ನನಗೆ ಕೊರೊನಾ ಆಗಿದ್ದರಿಂದ ಮನೆಗೆ ಬೀಗ ಹಾಕಿ ಅರೆಅಂಗಡಿಯ ನನ್ನ ಮಗನ ಮನೆಯಲ್ಲಿ ಇದ್ದೆ. ಮನೆಯನ್ನು ನಮ್ಮ ಕೆಲಸದವರಾದ ಚಾಸಾ-7 ನೋಡಿಕೊಳ್ಳುತ್ತಿರುತ್ತಾರೆ. ಒಂದು ರಾತ್ರಿ ಸಮಯದಲ್ಲಿ ನನ್ನ ಮನೆಯಲ್ಲಿ ಕಳ್ಳತನ ಆಗಿತ್ತು. ಬೆಳಿಗ್ಗೆ ಚಾಸಾ-7 ಕೆಲಸದವರು ಮನೆಗೆ ಬಂದಾಗ ಬಾಗಿಲ ಬೀಗ ಒಡೆದು ಹಾಕಿದ್ದನ್ನು ನೋಡಿ ಆಕೆ ನನ್ನ ಮಗನಿಗೆ ಫೋನ್ ಮಾಡಿ ವಿಚಾರ ತಿಳಿಸಿರುತ್ತಾರೆ. ತಕ್ಷಣ ನನ್ನ ಮಗ ಕಡತೋಕಾದ ನಮ್ಮ ಮನೆಗೆ ಬಂದು ನೋಡಿದಾಗ ಮನೆಯ ಮುಂಬಾಗಿಲನ್ನು ಮುರಿದು, ದೇವರ ಮನೆಯ ಬಾಗಿಲ ಲಾಕ್‌ನ್ನು ಮುರಿದು ಒಳಗೆ ಕಪಾಟಿನಲ್ಲಿ ಇಟ್ಟಿದ್ದ ಒಂದು ಚಿನ್ನದ ಉಂಗುರ ಮತ್ತು ಒಂದು ಮೂಗುತಿಯನ್ನು ಯಾರೋ ಕಳುವು ಮಾಡಿಕೊಂಡು ಹೋಗಿದ್ದರು. ಈ ಬಗ್ಗೆ ನನ್ನ ಮಗ ದೂರು ನೀಡಿರುತ್ತಾರೆ. ಕಳುವಾದ 15 ದಿನಗಳ ನಂತರ ನ್ಯಾಯಾಲಯದ ಮುಂದೆ ಇರುವ 1 ಮತ್ತು 2 ನೇ ಆರೋಪಿತರನ್ನು ಪೋಲಿಸರು ನಮ್ಮ ಮನೆಗೆ ಕರೆದುಕೊಂಡು ಬಂದಿದ್ದರು. ಪೋಲೀಸರು ಅವರಿಬ್ಬರನ್ನು ವಿಚಾರಿಸಿದಾಗ ಅವರು ನಮ್ಮ ಮನೆಯಲ್ಲಿ ಕಳ್ಳತನ ಮಾಡಿದ್ದನ್ನು ಒಪ್ಪಿಕೊಂಡಿರುತ್ತಾರೆ. ಕಳುವಿನ ಬಗ್ಗೆ ಪೋಲೀಸರು ವಿಚಾರಣೆ ಮಾಡಿದಾಗ ಹೇಳಿಕೆ ನೀಡಿರುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ವಿ. ಎಂ. ಭಂಡಾರಿಯವರಿಂದಃ**

ಕಳ್ಳತನವಾದ ದಿನವೇ ಪೋಲೀಸರು ನಮ್ಮ ಮನೆಯ ಹತ್ತಿರ ಬಂದು ನನ್ನ ಹೇಳಿಕೆ ಪಡೆದಿರುತ್ತಾರೆ. ನಾನು ಹೊನ್ನಾವರ ಠಾಣೆಗೆ ಬಂದು ಪೋಲೀಸರಿಗೆ ಹೇಳಿಕೆ ನೀಡಿರುವುದಿಲ್ಲ. ಪೋಲೀಸರು ಆರೋಪಿತರನ್ನು ಕರೆದುಕೊಂಡು ಬರುವ ಮೊದಲು ನಾನು ಅವರನ್ನು ನೋಡಿರಲಿಲ್ಲ.

ಆರೋಪಿತರು ಕಳುವು ಮಾಡಿರುವುದಾಗಿ ಪೋಲೀಸರು ತಿಳಿಸಿರುತ್ತಾರೆ. ಪೋಲೀಸರು ಆರೋಪಿತರನ್ನು ನಮ್ಮ ಮನೆಗೆ ಕರೆದುಕೊಂಡು ಬಂದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**